


## ನಮ್ಮೂರು ನೆನಪಿಗೆ ಬಂತು

‘ನಿಲ್ದಾಣಗಳ ನಾದಲೀಲೆ’ (ಮೇ 02, ಸುಧಾಕರ್ ದೇವಾಡಿಗ) ಪ್ರಬಂಧ ಬಹಳ ಸೊಗಸಾಗಿದೆ. ಬಸ್ ನಿಲ್ದಾಣದ ಸಂಪೂರ್ಣ ಚಿತ್ರಣ ತೆರೆದಿಟ್ಟಿದೆ. ಎಲ್ಲೆಂದರಲ್ಲಿ ಉಗುಳಿ ಅಸಹ್ಯ ತರಿಸುವ ಎಲೆ ಅಡಿಕೆ, ಗುಟ್ಕಾದ ಹೋಳಿಯ ರಂಗನ್ನು ಮರೆತಂತೆ ಕಾಣುತ್ತದೆ. ನಮ್ಮೂರ ಬಸ್‌ಸ್ಟ್ಯಾಂಡ್ ನೆನಪಾಯಿತು.

—ಅನಸೂಯ ತ್ರಿವಿಕ್ರಮ್ ಕೇದಿಗೆಮನೆ

## ಮಂದಹಾಸ ಮೂಡಿಸಿತು

ಪ್ರಬಂಧ ಓದುಗರಲ್ಲಿ ಮಂದಹಾಸ ಮೂಡಿಸುವುದರಲ್ಲಿ ಯಶಸ್ವಿಯಾಗಿದೆ. ಪ್ರಬಂಧ ಓದುತ್ತಿದ್ದಂತೆ, ನಲವತ್ತು ವರ್ಷಗಳ ಹಿಂದೆ ಬಸ್ ತಪ್ಪಿ ಹೋಗಿ ಸಾಗರ ಬಸ್ ನಿಲ್ದಾಣದಲ್ಲಿ ಇಡೀ ರಾತ್ರಿ ಕಳೆದ ಘಟನೆ ನೆನಪಿಗೆ ಬಂದಿತು.

—ವಸುಧಾ, ಬೆಂಗಳೂರು

## ಸೂಪರ್ ರಿಷಭ್!

‘ರಿಷಭ್ ರಿಹ್ಯಾಬ್... ಸೂಪರ್ಬ್’ (ಮೇ 02, ವಿಶಾಖ ಎನ್.) ಕ್ರೀಡಾಲೇಖನ ಚೆನ್ನಾಗಿದೆ. ರಿಷಭ್ ಪಂತ್ ಬಗ್ಗೆ ಸವಿವರ ಒಳಗೊಂಡಿದೆ. ಈಗ ಅವರು ಮೈದಾನದಲ್ಲಿ ಆಟವಾಡುವುದನ್ನು ನೋಡುತ್ತಿದ್ದರೆ ಇದು ಕನಸೋ ನನಸೋ ಎನಿಸುತ್ತದೆ.

—ಎಂ.ಎಸ್. ವಿಜಯಕುಮಾರ್, ಬೆಂಗಳೂರು

## ಅಚ್ಚರಿ ತಂದ ಸೇಬು ಕೃಷಿ

‘ಆ್ಯಪಲ್ ಬಸವರಾಜು!’ (ಮೇ 02, ಶಶಿಕುಮಾರ್ ಸಿ.) ‘ಕೃಷಿ–ಖುಷಿ’ ಲೇಖನ ಓದಿ ಅಚ್ಚರಿಯೊಂದಿಗೆ ಸಂತಸವೂ ಆಯಿತು. ಹೊಸಕೋಟೆಯ ರೈತ ಬಸವರಾಜು ಅವರ ಪ್ರಯೋಗ, ಪ್ರಯತ್ನ, ಶ್ರಮ ಶ್ಲಾಘನೀಯ. ಕೃಷಿಯಲ್ಲಿ ಈ ರೀತಿಯ ಹೊಸ ಪ್ರಯೋಗಗಳ ಅಗತ್ಯ ಹೆಚ್ಚಿದೆ ಎಂತಲೂ ಅನಿಸುತ್ತಿದೆ.

—ಸುವರ್ಣಾ, ಮೈಸೂರು

## ಆಸಕ್ತಿ ಬಿತ್ತುವ ‘ಮರಗಳ ಕಥೆ’

ವಿನು ಗಂಗೆ ಅವರ ಲೇಖನ ಅಂದ ತಕ್ಷಣ ಈ ವಾರ ಯಾವ ಅಪರೂಪದ ಮರಗಳ ಬಗ್ಗೆ ಬರಹ ಇದೆ ಎಂಬ ಕುತೂಹಲ ಮೂಡುತ್ತದೆ. ಹಲವು ಉಪಯುಕ್ತ ಮರಗಳ ಬಗ್ಗೆ ಚಿಕ್ಕದಾಗಿ, ಚೊಕ್ಕವಾಗಿ ಬರೆಯುವ ಅವರ ಶೈಲಿ ಆಕರ್ಷಣೀಯ. ‘ಕೇರಿಗೊಂದು ಶಾಲೆ, ಮನೆಗೊಂದು ಮರ’ ಇಂದಿನ ಜರೂರತ್ತು ಆಗಿದೆ.

ಈಚೆಗಿನ ‘ಮರಗಳಿಗೆ ಭೂತಾತ್ಮದ ಬೆಸುಗೆ’ ಲೇಖನ ಓದಿದೆ. ಈಗಲೂ ಕೆಲವು ಹಳ್ಳಿಗಳಲ್ಲಿ ಭೂತಗಳು ವಾಸಿಸುವ ಮರ ಎಂದು ಜನರು ಅದರತ್ತ ಸುಳಿಯದೆ ಅದರ ಪಾಡಿಗೆ ಬಿಟ್ಟದ್ದನ್ನು ನೋಡಿದರೆ ನಮ್ಮ ಹಿಂದಿನವರ ಚಾಣಾಕ್ಷತೆಗೆ ತಲೆದೂಗಬೇಕು ಅನಿಸುತ್ತದೆ.

—ಉಷಾಲಕ್ಷ್ಮಿ ಅರವಿಂದ ಹೊಳ್ಳ, ಬೆಂಗಳೂರು

## ಎಂದೂ ಅಳಿಸಲಾರದ ಚಿತ್ರ

‘ಚಂದನವನದ ವಾಮನ’ (ಮೇ 02, ರಚಹ) ಸಮಗ್ರ ಚಿತ್ರ ಕಟ್ಟಿಕೊಡುವ ಚೊಕ್ಕ ಲೇಖನ. ಆನೆಯನು ಕನ್ನಡಿಯಲಿ ಹಿಡಿದಿಡುವಂತೆ ಚಂದನವನದಲಿ ತ್ರಿವಿಕ್ರಮನಾಗಿ ಆಕ್ರಮಿಸಿದ ವಾಮನಮೂರ್ತಿ ದ್ವಾರಕೀಶರ ವ್ಯಕ್ತಿತ್ವ ಮತ್ತು ಅವರ ಸಾಧನೆಯನ್ನು ಚಿಕ್ಕ ಚೊಕ್ಕ ಲೇಖನದಲ್ಲಿ ಬಿಂಬಿಸಲಾಗಿದೆ. ಏಳುಬೀಳುಗಳನ್ನು ಲೆಕ್ಕಿಸದೆ ಮುನ್ನುಗ್ಗುವ ಅವರ ಪ್ರಯತ್ನ, ಪ್ರಯತ್ನಕ್ಕೆ ಪೂರಕವಾಗಿ ಯೋಗ್ಯತೆ, ಇವುಗಳೊಡನೆ ಅಭಿಮಾನಿಗಳ ಕೃಪೆಯಿಂದ ಬೀಜವು ಪಲ್ಲವಿಸಿ ಕಲ್ಪವೃಕ್ಷವಾಗಿ ಮುನ್ನೂರಕ್ಕೂ ಮೀರಿ ಹೆಚ್ಚಿನ ಚಿತ್ರಗಳಲ್ಲಿ ಸದಭಿರುಚಿಯ ಪಾತ್ರಗಳ ಹಣ್ಣು ಕೊಡಲು ಸಾಧ್ಯವಾಯಿತು. ಸೋಲುಗಳನ್ನು ಲೆಕ್ಕಿಸದೆ ಚಿತ್ರರಂಗಕ್ಕೆ ಹೊಸತನ್ನು ನೀಡಬೇಕೆನ್ನುವ ಹುಮ್ಮಸ್ಸಿನ ಕನಸುಗಾರ ಚಿತ್ರರಂಗದ ಪರದೆಯ ಮೇಲೆ ಎಂದೂ ಅಳಿಸಲಾರದ ಚಿತ್ರವಾಗಿ ಮೂಡಿ ಯುವ ನಟರಿಗೆ ಪ್ರೇರಣೆಯಾಗಿದ್ದಾರೆ.



—ವ್ಯಾಸ, ಬೆಂಗಳೂರು

## ಭಾವಪೂರ್ಣ ನುಡಿನಮನ

‘ನಂದಾದೀಪ’ ಲೇಖನ, ದ್ವಾರಕೀಶ್‌ರವರ ಚಿತ್ರರಂಗದ ನಂಟು, ಉದ್ಯಮದಲ್ಲಿನ ಸಿಹಿಕಹಿ ನೆನಪುಗಳು, ಅವರು ಸವೆಸಿದ ಕಠಿಣ ಹಾದಿ ಇವುಗಳೆಲ್ಲವನ್ನೂ ಬಹಳ ಚೊಕ್ಕವಾಗಿ ನಿರೂಪಿಸಿದೆ. ವಾಮನನಾಗಿ ಬಂದು ತ್ರಿವಿಕ್ರಮನಾಗಿ ಬೆಳೆದು, ಪ್ರಚಂಡ ಕುಳ್ಳನಾಗಿ ಪ್ರಖ್ಯಾತರಾದ ದ್ವಾರಕೀಶ್‌ರವರಿಗೆ ಭಾವಪೂರ್ಣ ನುಡಿನಮನ ಇದಾಗಿದೆ.

—ವಸುಂಧರಾ ಸತ್ಯ, ದೊಡ್ಡಬಳ್ಳಾಪುರ




## ಸಮಾಜದ ಪ್ರತಿಬಿಂಬ

‘ಹರಿಯುವ ನೀರಿಗೆ ನೂರೆಂಟು ಅಡೆತಡೆ... ದೊಣೆನಾಯಕರಿಂದ ಎಂದು ಬಿಡುಗಡೆ?’ (ಮೇ 02, ಕೋಡಿಬೆಟ್ಟು ರಾಜಲಕ್ಷ್ಮಿ) ಮುಖಪುಟ ಲೇಖನ, ಪ್ರಸ್ತುತ ಸಮಾಜದಲ್ಲಿ ಮಹಿಳೆಯು ದಿನನಿತ್ಯ ಎದುರಿಸುತ್ತಿರುವ ಪರಿಸ್ಥಿತಿಯ ಪ್ರತಿಬಿಂಬದಂತಿದೆ. ತನ್ನ ವೃತ್ತಿಜೀವನದಲ್ಲಿ ಅಪಾರ ಸಾಧನೆ ಮಾಡಿ ಯಶಸ್ವಿಯಾಗಿರುವ ಮಹಿಳೆಯು ಇಂದಿಗೂ ಮನೆಯಲ್ಲಿ ತನ್ನ ಗಂಡನ ಅಡಿಯಾಳು ಎಂದರೆ ಸುಳ್ಳಲ್ಲ. ಇಂತಹ ಎಷ್ಟೋ ಉದಾಹರಣೆಗಳು ನಮ್ಮ ಕಣ್ಣ ಮುಂದೆಯೇ ಇವೆ. ಹೆಣ್ಣು ಮನೆಯ ಒಳಗೆ, ಹೊರಗೆ ದುಡಿದು ಸಂಸಾರ ನಡೆಸುತ್ತಾಳೆ. ಅವಳ ಪರಿಶ್ರಮದ ಅರಿವಿದ್ದರೂ ತಾನು ಹೇಳಿದಂತೆಯೇ ಅವಳು ಕೇಳಬೇಕು ಎಂಬ ಮನೋಭಾವ ಗಂಡಿನದು. ಕೂಲಿ ನಾಲಿ ಮಾಡುವ ಮಹಿಳೆಯಿಂದ ಹಿಡಿದು ದೊಡ್ಡ ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿರುವ ಮಹಿಳೆಯರ ಮೇಲೂ ಈ ಪುರುಷ ಪ್ರಧಾನ ಸಮಾಜ ದಬ್ಬಾಳಿಕೆ ನಡೆಸುತ್ತಲೇ ಬಂದಿದೆ. ಅವಳು ತನ್ನ ಇಷ್ಟದಂತೆ ಮಾಡುವ ಹಾಗಿಲ್ಲ, ನಡೆಯುವ ಹಾಗೆಯೂ ಇಲ್ಲ. ಅವಳಿಗೆ ಸ್ವಾತಂತ್ರ್ಯ ಕೊಟ್ಟರೆ ದಾರಿ ತಪ್ಪುತ್ತಾಳೆ ಎಂಬ ಸಂಕುಚಿತ ಮನೋಭಾವದಿಂದ ಗಂಡು ಹೊರಬರುವುದು ಯಾವಾಗ?

—ಲಕ್ಷ್ಮಿ ಶ್ರೀಧರ್, ಬೆಂಗಳೂರು

## ನೆಮ್ಮದಿಯುತ ನಾಳೆ ಸಿಗಲಿ

ಮಹಿಳೆಯರ ಬದುಕಿನ ಕುರಿತಾಗಿ ಲೇಖನದಲ್ಲಿ ಅಡಕವಾಗಿರುವ ಅಭಿಪ್ರಾಯಗಳು ಸ್ವಾಗತಾರ್ಹ. ಅತ್ಯಾಚಾರ, ಹತ್ಯೆಯಂಥ ಸಮಾಜಘಾತುಕ ಕೃತ್ಯಗಳಿಂದ, ತಪ್ಪು ಮಾಡದೆಯೂ ಹೆಣ್ಣು ಅನುಭವಿಸಿದ ನರಕಯಾತನೆಗಳಿಗೆ ಕೊನೆ ಇಲ್ಲವೇ? ಕುಟುಂಬದ ಒಳಿತಿಗಾಗಿ ತನ್ನ ಅವಳಿಗೂ ಆಸೆ, ಆಕಾಂಕ್ಷೆಗಳನ್ನು ತ್ಯಾಗ ಮಾಡಿದರೂ ಅದಕ್ಕೆ ಕೃತಜ್ಞತೆ ಸಲ್ಲಿಸುವವರಾರು? ಅವಳ ಮನೋಬಲ ಹೆಚ್ಚಿಸಿ ಅವಳಿಗೆ ನೆಮ್ಮದಿಯುತ ನಾಳೆಗಳು ಸಿಗುವಂತಾಗಲಿ.

—ರಾಜೇಶ್ವರಿ ಬೊರಗಿ, ಹಾವೇರಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in